2. ಈ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಮಂಜೂರಾದ ಹಣದ ವಿವರ ಈ ಕೆಳಕಂಡಂತಿದೆ.

ಸಾಲು	ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ)	ಖರ್ಚು (ರೂ. ಲಕ್ಷಗಳಲ್ಲಿ)
1999-2000	40.17	38.84
2000-01	42.67	41.72
2001-02	83.06	64.70

ಪ್ರತಿ ಗ್ರಾಮ ಪಂಚಾಯಿತಿಗಳ ಕಾಮಗಾರಿಗಳ ವಿವರಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗಿದೆ.

3. ವಿವರಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗಿದೆ.

ಜಿಲ್ಲಾಪಂಚಾಯತ್ ವ್ಯಾಪ್ತಿಯಲ್ಲಿ ಕಾಮಗಾರಿಗಳನ್ನೂ ಪಟ್ಟಭದ್ರ ಹಿತಾಸಕ್ತಿಗಳು ಬೇನಾಮಿಯಾಗಿ ಗುತ್ತಿಗೆ ವಹಿಸಿಕೊಂಡಿರುವ ಬಗ್ಗೆ

104(962) ಶ್ರೀ ಜಯಪ್ರಕಾಶ್ ಹೆಗ್ಡೆ(ಬ್ರಹ್ಮವರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಜಿಲ್ಲಾ ಪಂಚಾಯತ್‌ಗಳ ವ್ಯಾಪ್ತಿಯಲ್ಲಿನ ಕಾಮಗಾರಿಗಳನ್ನು ಪಟ್ಟಭದ್ರ ಹಿತಾಸಕ್ತಿಗಳು ಬೇನಾಮಿಯಾಗಿ ಗುತ್ತಿಗೆ ವಹಿಸಿಕೊಂಡು ಮಾಡುತ್ತಿರುವ ಬಗ್ಗೆ ದೂರುಗಳು ಸರ್ಕಾರಕ್ಕೆ ಬಂದಿದೆಯೇ? ಬಂದಿದ್ದಲ್ಲಿ, ಆ ಕುರಿತು ಕೈಗೊಳ್ಳುವ ಮುಂಜಾಗರೂಕತಾ ಕ್ರಮಗಳು ಯಾವುವು?

2. ಪಂಚಾಯತ್‌ಗಳಲ್ಲಿನ ಕಾಮಗಾರಿಗಳ ಹಣ ಪಾವತಿ ಮಾಡುವ ಮುನ್ನ ಕಾಮಗಾರಿ ಸ್ಥಾಯಿ ಸಮಿತಿಯವರು ಸೂಕ್ತ ಪರಿಶೀಲನೆ ಇತ್ಯಾದಿ ಕ್ರಮಗಳನ್ನು ಅನುಸರಿಸುವುದಿಲ್ಲವೆ?

ಜಿಲ್ಲಾ ಸದಸ್ಯರುಗಳು ತಮ್ಮ ವ್ಯಾಪ್ತಿಯಲ್ಲಿನ ಕಾಮಗಾರಿಗಳ ಮೇಲೆ ನಿಗಾ ವಹಿಸುವ ಜವಾಬ್ದಾರಿಯನ್ನು ಹೊಂದಿರುವುದಿಲ್ಲವೆ?

ಆ ಕುರಿತು ನೀತಿ ಸಂಹಿತೆಗಳನ್ನು ನಿಗದಿಪಡಿಸಿರುವುದಿಲ್ಲವೆ? ಕನಿಷ್ಠ ನೀತಿ ಸಂಹಿತೆಗಳನ್ನು ನಿಗದಿಪಡಿಸಿದಲ್ಲಿ ಅವ್ಯವಹಾರಗಳನ್ನು ನಿರ್ಭಂಧಿಸಲು ಅನುಕೂಲವಾಗುವುದಿಲ್ಲವೆ?

3. ಜಿಲ್ಲಾ ಪಂಚಾಯತ್‌ಗಳಿಗೆ ಈ ಕುರಿತಾಗಿ ನಿಗದಿಪಡಿಸಿರುವ ಕ್ರಮ ನಿಯಮಗಳೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

1. ಇಲ್ಲ

ಉದ್ಭವಿಸುವುದಿಲ್ಲ.

2. ಪಂಚಾಯತ್‌ಗಳಲ್ಲಿ ಅನುಷ್ಠಾನಗೊಳಿಸಿದ ಕಾಮಗಾರಿಗಳಿಗೆ ಅಭಿಯಂತರರುಗಳು ಅಥವಾ ಕಾರ್ಯನಿರ್ವಾಹಕ ಅಧಿಕಾರಿಗಳು ಆಳತೆ ಪರೀಕ್ಷೆ ಮಾಡಿದ ನಂತರ ಹಣವನ್ನು ಸಂಬಂಧಿಸಿದವರಿಗೆ ಪಾವತಿಸಲಾಗುತ್ತದೆ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 150 (2) ಮತ್ತು 188 (2) ರಡಿಯಲ್ಲಿ ಸಂಬಂಧಪಟ್ಟ ಸ್ಥಾಯಿ ಸಮಿತಿಯ ಅಧ್ಯಕ್ಷರು ಸಂಬಂಧಪಟ್ಟ ಸಮಿತಿಯ ಕಾಮಗಾರಿಯನ್ನು ಪರಿಶೀಲಿಸಲು ಹಕ್ಕುಳ್ಳವರಾಗಿರುತ್ತಾರೆ.

ಅನುಷ್ಠಾನಗೊಳಿಸಿದ ಕಾಮಗಾರಿಗಳಲ್ಲಿ ಲೋಪವೇನಾದರೂ ಕಂಡುಬಂದಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರು ಅಧ್ಯಕ್ಷರ ಗಮನವನ್ನು ಸೆಳೆಯಲು ಕ.ಪಂ.ರಾಜ್ ಅಧಿನಿಯಮದಲ್ಲಿ ಅವಕಾಶ ಕಲ್ಪಿಸಲಾಗಿದೆ. (ಪ್ರಕರಣ 181(2).

ಕಾಮಗಾರಿಗಳ ಅಳತೆಪರೀಕ್ಷೆಯನ್ನು ಅಧಿಕಾರಿಗಳು ಪಿ.ಡಬ್ಲ್ಯೂ.ಡಿ. ಕೋಡಲ್ ರೂಲ್ಸ್ ಪ್ರಕಾರ ನಡೆಸುವುದರಿಂದ ಪ್ರತ್ಯೇಕ ನೀತಿ ಸಂಹಿತೆ ಅವಶ್ಯಕತೆ ಇರುವುದಿಲ್ಲ.

3. ಸರ್ಕಾರವು ಈಗಾಗಲೇ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ನ್ನು ಜಾರಿಗೆ ತಂದಿರುವುದರಿಂದ, ಎಲ್ಲಾ ಕಾಮಗಾರಿಗಳ ಅನುಷ್ಠಾನದಲ್ಲಿ ಪಾರದರ್ಶಕ ಅಧಿನಿಯಮದಲ್ಲಿನ ನಿಯಮಗಳನ್ನು ಪಾಲಿಸಬೇಕಾಗಿರುತ್ತದೆ. ಈ ಪಾರದರ್ಶಕತೆ ನಿಯಮಗಳು ಪಂಚಾಯತ್ ರಾಜ್ ಕಾಮಗಾರಿಗಳಿಗೂ ಅನ್ವಯಿಸುತ್ತದೆ.

ಹುಲಸೂರು ಮತಕ್ಷೇತ್ರದಲ್ಲಿನ ಹೊಸ ರಸ್ತೆಗಳ ನಿರ್ಮಾಣ

105(865) ಶ್ರೀ ರಾಜೇಂದ್ರ ವರ್ಮ (ಹುಲ್‌ಸೂರ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಕಳೆದ 3 ವರ್ಷಗಳ ಅವಧಿಯಲ್ಲಿ ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಕಿ.ಮೀ ಹೊಸ ರಸ್ತೆಯನ್ನು ಜಿಲ್ಲಾ ಪಂಚಾಯತ್ ಮತಿಯಿಂದ ನಿರ್ಮಿಸಲಾಗಿದೆ. (ಗ್ರಾಮವಾರು ವಿವರಗಳನ್ನು ಒದಗಿಸುವುದು)

2. ಇದಕ್ಕಾಗಿ ಪ್ರತಿ ವರ್ಷ ವೆಚ್ಚ ಮಾಡಲಾಗಿರುವ ಮೊತ್ತವೆಷ್ಟು?

3. ಮೇಲ್ಕಂಡ ಅವಧಿಯಲ್ಲಿ ಈ ಮತಕ್ಷೇತ್ರದಲ್ಲಿ ಹೊಸ ರಸ್ತೆ ನಿರ್ಮಾಣ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4. ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

1. ಕಳೆದ 3 ವರ್ಷಗಳ ಅವಧಿಯಲ್ಲಿ ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ 9.34 ಕಿಮೀ ಹೋಸ ರಸ್ತೆ ನಿರ್ಮಾಣ ಮಾಡಲಾಗಿದೆ. ಗ್ರಾಮವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಇದಲ್ಲದೆ 31.52 ಕಿ.ಮೀ ಜಲ್ಲಿ ರಸ್ತೆ, 19.00 ಕಿ.ಮೀ ಮರು ಜಲ್ಲಿ ರಸ್ತೆ ಹಾಗೂ 15.32 ಕಿ.ಮೀ ಡಾಂಬರೀಕರಣ ವಿವಿಧ ಕಾರ್ಯಕ್ರಮಗಳಲ್ಲಿ ಮಾಡಲಾಗಿದೆ.

2. 1999-2000ನೇ ಸಾಲಿನಲ್ಲಿ ರೂ. 3.00 ಲಕ್ಷ ಹಾಗೂ 2001-02ನೇ ಸಾಲಿನಲ್ಲಿ ರೂ. 14.75 ಲಕ್ಷಗಳನ್ನು ಹೊಸ ರಸ್ತೆ ನಿರ್ಮಾಣಕ್ಕಾಗಿ ವೆಚ್ಚ ಮಾಡಲಾಗಿದೆ. ಈಗಿರುವ ಜಲ್ಲಿ ರಸ್ತೆ ಮತ್ತು ಡಾಂಬರೀಕರಣಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ರೂ. 226.21 ಲಕ್ಷ ವೆಚ್ಚಮಾಡಲಾಗಿದೆ.

3. ಇಲ್ಲ

4. ಅನ್ವಯಿಸುವುದಿಲ್ಲ.

ಅನುಬಂಧ

(ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ - 865)

ಕ್ರ.ಸಂ	ಕೆಲಸದ ಹೆಸರು	ಅಂದಾಜು ಪಟ್ಟಿ (ರೂ. ಲಕ್ಷಗಳಲ್ಲಿ)	ಖರ್ಚಾದ ಹಣ (ರೂ. ಲಕ್ಷಗಳಲ್ಲಿ)	ನಿರ್ಮಾಣಗೊಂಡ ಹೊಸ ರಸ್ತೆಗಳು ಕಿ.ಮೀ
1	2	3	4	5
	1999-2000			
1.	ಬರದಾಪೂರ ಗ್ರಾಮದಿಂದ ಡಾವರಗಾಂವ ಗ್ರಾಮದ ರಸ್ತೆ ನಿರ್ಮಾಣ	3.00	3.00	1.52